

# ಏಷ್ಯಾದಲ್ಲೇ ಅತಿದೊಡ್ಡ ಅಕ್ವೇರಿಯಮ್

ಮನೆಯಲ್ಲಿರುವ ಪುಟ್ಟ ಗಾಜಿನ ಅಕ್ವೇರಿಯಂನಲ್ಲಿ ಬಣ್ಣ ಬಣ್ಣದ ಮೀನುಗಳನ್ನು ಸಾಕಿ ಅವುಗಳಿಗೆ ಆಹಾರ ಕೊಟ್ಟು ಖುಷಿಪಡುವವರಿಗೆ ಅದ್ಭುತ ಎನಿಸುವ ಒಂದು ಕೌತುಕ ಚೀನಾ ದೇಶದಲ್ಲಿದೆ.

ಅದು ಚಿಮೆಲಾಂಗ್ ಎಂಬಲ್ಲಿರುವ ಏಷ್ಯಾದಲ್ಲೇ ಅತಿ ದೊಡ್ಡದೆಂಬ ಹೆಗ್ಗಳಿಕೆಯಿರುವ ಓಷನ್ ಕಿಂಗ್ಡ್ ಅಕ್ವೇರಿಯಮ್. ಪಿಂಗಾಣಿಯ ತಳ, ಗಾಜಿನ ಮೇಲ್ಭಾಗವಿರುವ ಇದು ಸಮುದ್ರಕ್ಕೆ ಸನಿಹದಲ್ಲಿರುವುದರಿಂದ ಕಡಲಿನ ಸಹಜ ನೀರು ಇದರೊಳಗೆ ಹರಿದು ಬರುವ ಅನುಕೂಲವಿದೆ. ಇದರ ತೊಟ್ಟಿ ಮತ್ತು ನೀರು ಹೊರಬಿಡುವ ಕಿಟಕಿಗಳೂ ಬಹು ದೊಡ್ಡದಾಗಿವೆ.

12. 9 ದಶಲಕ್ಷ ಗ್ಯಾಲನ್ ನೀರು ಈ ಅಕ್ವೇರಿಯಮ್ ಒಳಗೆ ತುಂಬಬಹುದು. ಅಳಿಯುತ್ತಿರುವ ಏಳು ವಿಭಿನ್ನ ಜಲಚರಗಳಲ್ಲದೆ ಬಣ್ಣದ ಮೀನುಗಳು, ಡಾಲ್ಫಿನ್ ಮೊದಲಾದ ಜಾತಿಗಳೂ ಇದರಲ್ಲಿವೆ. ಅವುಗಳಿಗೆ ನೈಸರ್ಗಿಕ ಪರಿಸರ ಬೇಕೆಂಬ ಕಾರಣಕ್ಕೆ ಸಾಗರ ಸಸ್ಯಗಳನ್ನು ನೆಡಲಾಗಿದೆ. ಸಾವಿರಾರು ಪ್ರವಾಸಿಗರು ಇದನ್ನು ನೋಡಲು ಆಗಮಿಸಿ ಸಂತಸಪಡುತ್ತಾರೆ.

■ ಪ. ರಾಮಕೃಷ್ಣ ಶಾಸ್ತ್ರಿ



